ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 6, January-February 2023, Pp. 52-59
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪಾಳೆಯಗಾರರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ನಾಗತಿಯರ ಪಾತ್ರ

**ರಮ್ಯ ಎನ್.ಆರ್***

*ಸಂಶೋಧನಾ ವಿದ್ಯಾರ್ಥಿನಿ, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿಜಯನಗರ.

***Abstract:***

*ಕರ್ನಾಟಕದ ಚರಿತ್ರೆಯಲ್ಲಿ ವಿಜಯನಗರೋತ್ತರ ಕಾಲವು ಮಹತ್ವದ್ದಾಗಿದೆ. ಚರಿತ್ರೆಯ ಪುಟಗಳಲ್ಲಿ ಯಾವುದೇ ರಾಜ ಅಥವಾ ಆತನ ಸಾಧನೆಗಳನ್ನು ಕಾಣುತ್ತೇವೆ. ಆದರೆ ಅವರ ಸಾಧನೆಗೆ ಬೆನ್ನೆಲುಬಾಗಿ ನಿಂತು ಮಹತ್ವದ ಪಾತ್ರವನ್ನು ವಹಿಸಿದ ರಾಣಿ ಅಥವಾ ನಾಗತಿಯರ ಪಾತ್ರವನ್ನು ತಿಳಿದುಕೊಳ್ಳುವುದು ಅಗತ್ಯವೆನಿಸುತ್ತದೆ. ಏಕೆಂದರೆ ನಾಗತಿಯರ ಅಂದಿನ ಕಾಲದ ಪಾತ್ರವೇನು? ಅವರಿಗೆ ದೊರೆಯುತ್ತಿದ್ದ ಪ್ರಾತಿನಿಧ್ಯಗಳು, ಆಡಳಿತದಲ್ಲಿ ಅವರ ಅಸ್ಥಿತ್ವ ಹಾಗೂ ಅಸ್ಮಿತೆಗಳು, ರಾಜಕೀಯ, ಸಾಮಾಜಿಕ, ಆರ್ಥಿಕ ಅಂಶಗಳನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.*

**Keywords:** *ಪಾಳೇಗಾರ, ನಾಯಕಿ, ನಾಗತಿ, ನಾಗತಿಹಳ್ಳಿ, ನಾಗತಿ ಕೆರೆಗಳು.*

## ಪೀಠಿಕೆ

ಭಾರತೀಯ ಪರಂಪರೆಯಲ್ಲಿ ಸ್ತ್ರೀಯರಿಗೆ ಪ್ರಾಚೀನ ಕಾಲದಿಂದಲೂ ವಿಶೇಷವಾದ ಗೌರವವಿದೆ. ಗೌರವ ಅವಳಿಗೆ ಹುಟ್ಟಿನೊಂದಿಗೆ ಬಂದಿದ್ದು ಅವಳು ಸೃಷ್ಟಿಯ ಮೂಲ ಆ ಕಾರಣಕ್ಕೆ ಅವಳ ಸ್ಥಾನ ಭದ್ರವಾಗಿದೆ. ಸೃಷ್ಟಿ ವಿಕಾಸತತ್ವದ ಚರಿತ್ರೆಯ ಸಂಕಥನದಲ್ಲಿ ಸ್ತ್ರೀ ಪ್ರಧಾನ ಸ್ಥಾನ, ವೇದ ಪುರಾಣ ಸ್ಮೃತಿಗಳ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಸ್ತ್ರೀಯರ ಪಾಲಿಗೆ ಅಧಿಕಾರವೆಂಬುದು ಪ್ರಾಶಸ್ತ್ಯದ ಯುಗವಾಗಿತ್ತು. ಆರಂಭದ ವೇದಕಾಲದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯ, ಸಮಾನತೆ, ಧಾರ್ಮಿಕ ಸಂಸ್ಕಾರ ಹಾಗೂ ಶಿಕ್ಷಣದಲ್ಲಿ ಆಕೆಗೆ ಎಲ್ಲಾ ಹಕ್ಕು ಇತ್ತು. ನಂತರ ವೇದೋತ್ತರ ಸ್ತ್ರೀಯ ಅಧಿಕಾರಗಳು ಗೌಣಕ್ಕೆ ಒಳಗಾದವು. ಪುರುಷರ ಆಡಳಿತದಿಂದ ಮಾನ್ಯತೆ ಪಡೆದಿದ್ದ ಕಾಲಕ್ಕೆ ತಕ್ಕಂತೆ ಅವಳ ಏರುಧ್ವನಿ ಘಟಿಸುತ್ತಲೇ ಇತ್ತು. ಇದನ್ನು ಅಡಗಿಸುವ ತಂತ್ರ ಧಾರ್ಮಿಕ, ಹಾಗೂ ಸಾಮಾಜಿಕ ನೆಲೆಯಿಂದ ಜಾರಿಯಗುತ್ತಲೇ ಇತ್ತು, ಆದರೆ ಕ್ರಿ.ಶ 12ನೇ ಶತಮಾನ ಪುರುಷ ಪ್ರಧಾನ ಬಲವಾಗಿ ದಮನಿಸಲು ಮಹಿಳೆಗೆ ಸಿಕ್ಕ ಅಪೂರ್ವ ಕಾಲ ಎಂದು ಹೇಳಬಹುದು. ಕಾಲ ಬದಲಾದಂತೆ ಆಡಳಿತವನ್ನು ನಡೆಸಿದ ಮಹಿಳೆಯರು ರಾಜ್ಯದ ಚುಕ್ಕಾಣಿ ಹಿಡಿಯುವಲ್ಲಿ ಸಫಲರಾದರು. ಇದರ ಪರಿಣಾಮವಾಗಿ ಕೇವಲ ಪುರುಷರ ಪರವಾಗಿದ್ದ ದಾಖಲಾತಿಯ ಪ್ರಂಚದಲ್ಲಿ ಹೆಣ್ಣು ನಿಧಾನವಾಗಿ ಕಾಲಿಡಲು ಸಾಧ್ಯವಾಯಿತು. ಯಾವುದೇ ಕಾಲವಾದರೂ ಹೆಣ್ಣನ್ನು ತನ್ನ ಸ್ಥಾನಮಾನದಿಂದ ಉನ್ನತೀಕರಿಸುವುದು ಈ ರೀತಿಯ ಆಡಳಿತವೆಂದು ತಿಳಿಯಬೇಕಾಗುತ್ತದೆ. ದಕ್ಷಿಣ ಭಾರತದಲ್ಲಿ 12ನೇ ಶತಮಾನದಿಂದ 15ನೇ ಶತಮಾನದವರೆಗೆ ಕಲೆ, ಸಾಹಿತ್ಯ, ಆಡಳಿತ ಮತ್ತು ಯುದ್ಧಗಳಲ್ಲಿ ಮಿಂಚಿದ ಅನೇಕ ಮಹಿಳೆಯರ ಕುರಿತು ಕೆ.ಎಂ. ಫಣಿಕ್ಕರ್ ಅವರು *'ಭಾರತದ ಮಹಿಳೆಯರು'* ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.

***Please cite this article as:*** ರಮ್ಯ ಎನ್.ಆರ್. (2023). ಪಾಳೆಯಗಾರರ ಕಾಲದ ಆಡಳಿತ ವ್ಯವಸ್ಥೆಯಲ್ಲಿ ನಾಗತಿಯರ ಪಾತ್ರ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(6), 52–59.

ಗಿರಿಜಾ ಟಿ., ಶ್ಯಾಮಲಾ ಸಿ.ಆರ್., ಕುಂ.ಬಾ. ಸದಾಶಿವಪ್ಪ, ಅಮರೇಶ್ ಯತಗಲ್, ಬಿ ರಾಜಶೇಖರಪ್ಪ, ಲಕ್ಷ್ಮಣ್ ತೆಲಗಾವಿ, ಅಬ್ದುಲ್ ಸತ್ತಾರ್, ಸುಮತೀಂದ್ರ ನಾಡಿಗ್, ವಿರೂಪಾಕ್ಷಿ ಪೂಜಾರಹಳ್ಳಿ, ಎಂ ಎಸ್ ಪುಟ್ಟಣ್ಣ, ಡಿ ಎನ್ ಯೋಗೀಶ್ವರಪ್ಪ, ಬಿ ಎಲ್ ವೇಣು, ತ.ರಾ.ಸು ಮೊದಲಾದ ವಿದ್ವಾಂಸರು ಇವರ ಬಗೆಗೆ ಹಲವಾರು ಕೃತಿ ಹಾಗೂ ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಪ್ರಸ್ತುತ ಲೇಖನದಲ್ಲಿ ಅದರ ಮಿತಿಗಳನ್ನು ಹೋಗಲಾಡಿಸುವ ಪ್ರಯತ್ನ ಮಾಡಲಾಗಿದೆ.

**ನಾಗತಿ ಪದದ ಬಳಕೆ**

ರಾಣಿಯರನ್ನು ಸಾಮಾನ್ಯವಾಗಿ ಅರಸಿ, ಪಿರಿಯರಸಿ, ಪಟ್ಟಮಹಾದೇವಿ, ಅಗ್ರಸತಿ, ರಾಣಿ ಎಂದು ಕರೆಯಲಾಗುತ್ತಿದ್ದು. ನಾಗತಿ ಎಂಬುದು 'ರಾಜ', 'ಗೌಡ', 'ಅರಸ' ಎಂಬ ಪುಲ್ಲಿಂಗ ಸೂಚಕ ಹಾಗೂ ವೃತ್ತಿವಾಚಕ ಪದಗಳಿಗೆ ಸಂವಾದಿಯಾಗಿ ಅವರ ಹೆಂಡತಿಯರಿಗೆ 'ರಾಣಿ', 'ಗೌಡತಿ', 'ಅರಸಿ' ಎಂಬ ಪದಗಳು ಅಂಟುವುದು ಸಹಜ. ಅದೇ ಈ ರೀತಿ ನಾಗತಿ ಎಂಬುದು ನಾಯಕ ಎಂಬುದರ ಸ್ತ್ರೀಲಿಂಗ ರೂಪಕವಾಗಿ ಪಾಳೆಯಗಾರರ ಹೆಂಡತಿಯರ ಹೆಸರುಗಳಿಗೆ ಅಂಟಿ ಕೊಂಡಿರುವುದುಂಟು 'ನಾಗತಿ' ಎಂಬುವುದು ನಾಯಕಿತಿ, ನಾಯಕಿತಿನಿ, ನಾಯಕಿನಿ, ನಾಗತಿ ಎಂಬ ರೂಪಗಳಲ್ಲಿ ಬಳಕೆಯಾಗಿದೆ.[1] ರಾಜರ ಹಿರಿಯ ಹೆಂಡತಿಯರನ್ನು ಪಟ್ಟದ ರಾಣಿ ಎಂದು ಕರೆಯಲಾಗುತ್ತಿತ್ತು. ಇಂತಹ ರಾಣಿಯರ ಗರ್ಭದಲ್ಲಿ ಜನಿಸಿದವರೇ ರಾಜ್ಯದ ಉತ್ತರಾಧಿಕಾರಕ್ಕೆ ಅರ್ಹರಾಗುತ್ತಿದ್ದರು. ಪಟ್ಟದ ರಾಣಿಯರನ್ನು ನಾಗತಿ ಎಂದು ಕರೆಯಲಾಗುತ್ತಿತ್ತು. ಉಳಿದ ಹೆಂಡತಿಯರನ್ನು ನಾಗತಿ ಎಂದು ಕರೆಯದೆ ಬಂಗಾರನಾಗತಿ, ಬಂಗಾರ ಸ್ತ್ರೀಯರೆಂದು ಕರೆಯಲಾಗುತ್ತಿತ್ತು. ಬಂಗಾರ ಸ್ತ್ರೀಯರ ಮಕ್ಕಳಿಗೆ ರಾಜ್ಯದ ಹಕ್ಕು ದಕ್ಕುತ್ತಿರಲಿಲ್ಲ.

**ನಾಗತಿ ಪದದ ವಿವರಣೆ**

ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು (1979) ಹೊರತಂದಿರುವ ಕನ್ನಡ ನಿಘಂಟು 4ನೇ ಸಂಪುಟ ಪುಟ ಸಂಖ್ಯೆ 4450 ರಲ್ಲಿ ದಾಖಲಾಗಿರುವಂತೆ ನಾಗತಿ ಪದವು ನಾಲ್ಕು ಅರ್ಥಗಳಲ್ಲಿ ಬಳಕೆಯಲ್ಲಿರುವುದನ್ನು ನೋಡಬಹುದು.

**ನಾಗತಿ ಎಂದರೆ**

- *ನಾಗತಿ, 'ನಾಯಕಿತ್ತಿ'ನೋ.*
- *ನಾಗತಿ (ನಾ) ಜೀವನ ಚಲಿಸುವ ನಾಲ್ಕು ಬಗೆಯ ಸ್ಥಿತಿಗಳು, ಅನಿಮಿಷಗತಿ, ಮಾನವಗತಿ, ನಾರಕಗತಿ, ತಿರ್ಯಗ್ಗತಿ ಎಂಬ ಗತಿಗಳು ಅತಿಕಾಂಕ್ಷೆ ಯೆಂಬಗಳತಿ ವಿಸ್ಮಯವಾಗಿ ಕ್ಷಿತಿಯನೊಡೆದು ನಾಗತಿಯ ಧೃತಿಗೆಡಿಸುವ ಬಳಸಿಹುದಾ ಪುರದೊಳು (ತ್ರಿ.ಪು.ಸಾಂ: 4–40) ನಾ (ನಾಲ್+ಗತಿ)*
- *ನಾಗತಿ (ನಾ) ಒಬ್ಬಾತನ ಹೆಸರು; ದುಗ್ಗತಿಗವುಣ್ಡಿಯ ಮಗಂ ನಾಗತಿ ಸಾಲತ್ತಿಯ(ತು) ಐಗೊಳಸತ್ತಂ (ಸೌತ್ ಇಂಡಿಯಾ ಇನ್‌ಸ್ಕ್ರಿಪ್ಸನ್–xx (14–4:878); ಶ್ರೀ ನಾಗತಿ ಅಳ್ದನ ದಣ್ಣೆ (ಎ.ಕ xx, 452–1: ಸು–1000) (?).*
- *ನಾಗತಿಯಮ್ಮ (ನಾ) ಒಬ್ಬಾತನ ಹೆಸರು; ಶ್ರೀ ನಾಗತಿಯಮ್ಮನ ಮಗಂ ಮಲಯ್ಯಂ (ಎ.ಕ.14, ಎಳಂದೂ 96–1:1000) (ನಾಗತಿ + ಅಮ್ಮ)*

ಈ ಹಿನ್ನೆಲೆಯಲ್ಲಿ ನಾಗತಿ ಪದದ ನಿಷ್ಪತ್ತಿಯನ್ನು ನೋಡಬಹುದು. ನಾಗತಿ ಎಂಬುದಕ್ಕೆ ಅಮ್ಮ ಎಂಬ ಸಂಬಂಧ ವಾಚಿ, ವಾರ್ಗಿಕ ಸೇರಿ 'ನಾಗತಿಯಮ್ಮ' ಎಂಬ ಹೆಸರಾಗಿ ಬಳಕೆಯಾಗಿದೆ. (ಉದಾಹರಣೆ– ರಾಣಿ ಈಶ್ವರಮ್ಮ ನಾಗತಿ, ರಾಣಿ ಅವ್ವ ನಾಗತಿ, ರಾಣಿ ಯಶೋದಮ್ಮ ನಾಗತಿ. 1565ರಲ್ಲಿ ನಡೆದ ತಾಳಿಕೋಟೆ ಕದನದಲ್ಲಿ ವಿಜಯನಗರ ಸೋಲನ್ನು ಅನುಭವಿಸಿತ್ತು. ಆಗ ಬೇಟೆ–ಪಶುಪಾಲನೆ ಸಂಸ್ಕೃತಿಯಿಂದ ಗುರುತಿಸಿಕೊಂಡ ಬೇಡ ಬುಡಕಟ್ಟಿನ ಸಮುದಾಯವು ವಿಜಯನಗರ ಸಾಮ್ರಾಜ್ಯಕ್ಕೆ ಕೆಲಸ ನಿರ್ವಹಿಸುತ್ತಿದ್ದ ಸಣ್ಣಪುಟ್ಟ ಪಾಳೆಯಗಾರರು ತಮ್ಮ ಪ್ರದೇಶಗಳಲ್ಲಿ ಸ್ವತಂತ್ರ್ಯವಾಗಿ ಆಳ್ವಿಕೆ ಮಾಡ ತೊಡಗಿದ್ದರು. ಆದ್ದರಿಂದಲೇ ದಕ್ಷಿಣ ಭಾರತದ ಚರಿತ್ರೆಯಲ್ಲಿ ವಿಜಯನಗರೋತ್ತರ ಕಾಲವನ್ನು ನಾಯಕರ ಅಥವಾ ಪಾಳೆಯಗಾರರ ಕಾಲವೆಂದು ಕರೆಯಬೇಕಾಗುತ್ತದೆ. ಪಾಳೆಯಗಾರರು ಎಂದರೆ ದಂಡಿನೊಳಗೆ ಪಾಳೆಯವನ್ನು ಹಾಕಿ ಇಳಿದು ಕೊಂಡು ಕದನಕ್ಕೆ ಸಿದ್ಧರಾಗಿರತಕ್ಕರೆಂದು ಅರ್ಥವಿದೆ.[2] ಹಾಗೆಯೇ ಈ ಪಾಳೇಗಾರರನ್ನು ಕುರಿತು ಪ್ರೊ. ಲಕ್ಷ್ಮಣ ತೆಲಗಾವಿ ಅವರು 77 ಪಾಳೆಗಾರರು ನಾಯಕರ ಅರಸು ಮನೆತನಗಳನ್ನು ಗುರುತಿಸಿದ್ದು ಗಮನಾರ್ಹವಾಗಿದೆ.

ನಾಗತಿಯರು  ವಿದ್ಯಾಭ್ಯಾಸವನ್ನು ಪಡೆದು ತಂದೆಗೆ–ಪತಿಗೆ  ಸಹಾಯ ಮಾಡುತ್ತಿದ್ದರು. ಪ್ರಭು ವರ್ಗದ ಮಕ್ಕಳು ಶಿಕ್ಷಣ, ಸಂಗೀತ, ನರ್ತನ, ಕಲೆಗಳ ಅಭ್ಯಾಸಕ್ಕೆ ಮಹತ್ವ ಕೊಡುತ್ತಿದ್ದರು. ಕೆಲವರು ಯುದ್ಧ ವಿದ್ಯೆಯಲ್ಲಿಯೂ ಪರಿಣತರಾಗಿದ್ದರು. ಹಾಗೆಯೇ ಸ್ತ್ರೀಯರು ಖಡ್ಗವಿದ್ಯೆ, ರಾಜ್ಯಾಢಳಿತ ವಿದ್ಯೆಯಲ್ಲಿ ಪ್ರವೀಣರಾಗಿ ತಮ್ಮದೇ ಆದ ಸ್ತ್ರೀ ಪಡೆಯನ್ನು ರಚಿಸಿಕೊಂಡು ಸಮರ್ಥ ರಾಣಿಯರೆನಿಸಿಕೊಂಡಿದ್ದರು. ಕೆಲವು ಸಂದರ್ಭಗಳಲ್ಲಿ ವಿಪತ್ತು ಸಂಕಟ ಎದುರಾದಾಗ ನಾಗತಿಯರು ರಾಜನಿಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ಹಾಗೆಯೇ ಪಾಳೆಯಗಾರರಂತೆ ನಾಗತಿಯರು ಆಡಳಿತ ನಡೆಸಿದ ಕಾಲಘಟ್ಟವನ್ನು ಕಾಣಬಹುದು. ಅಂತಹ ಸಂದರ್ಭದಲ್ಲಿ ರಾಜ್ಯದ ಆಳ್ವಿಕೆ ನಡೆಸಿದ ನಾಗತಿಯರ ಪಾತ್ರ ಪ್ರಮುಖವಾಗಿದೆ. ಮುಖ್ಯವಾಗಿ ನಾಗತಿಯರು ತಮ್ಮ ಮಕ್ಕಳನ್ನು ಮುಂದಿಟ್ಟುಕೊಂಡು ರಾಜ್ಯಾಭಾರ ಮಾಡಿರುವುದು ಗಮನಾರ್ಹವಾದ ಸಂಗತಿಯಾಗಿದೆ.

ಒಂದುವೇಳೆ ಹೆಣ್ಣಿಗೆ ಅಧಿಕಾರ ದೊರೆತರೂ ಪುರುಷ ವ್ಯವಸ್ಥೆಯ ಎದುರು ಹೆಚ್ಚು ಕಾಲ ಉಳಿಯುವ ಸಾಧ್ಯತೆಗಳು ಕಡಿಮೆ ಇರುತ್ತದೆ. ನಾಗತಿಯರು ಅಧಿಕಾರಕ್ಕೆ ಸಂಬಂಧಿಸಿದಂತೆ ಕೆಲವೊಮ್ಮೆ ಅಧಿಕಾರ ದೊರೆತು ಸಮರ್ಥವಾಗಿ ಕಾರ್ಯನಿರ್ವಹಿಸಿದ ಸಂದರ್ಭಗಳು ನಮ್ಮ ಇತಿಹಾಸದಲ್ಲಿ ಅಲ್ಲೊಂದು ಇಲ್ಲೊಂದು ದೊರೆಯುವುದುಂಟು ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಪಾಲ್ಗೊಳ್ಳದಿದ್ದರೂ ಪರೋಕ್ಷವಾಗಿ ಪ್ರಭಾವಿಸಿದ್ದು ವಿಶೇಷವಾಗಿ ಪಾಳೆಯಗಾರರ ಕಾಲದ ನಾಗತಿಯರಿಗೆ ದೊರೆತ ಸ್ಥಾನಮಾನಗಳು ಉಳಿದವರಿಗೆ ದಕ್ಕಿರಲಿಲ್ಲ ಚಿಕ್ಕ ವಯಸ್ಸಿನ  ಅರಸರು  ಅಧಿಕಾರಕ್ಕೆ ಬಂದಾಗ ಅವರ ಆಡಳಿತದಲ್ಲಿ ಸಹಭಾಗಿಯಾಗಿ ಆಡಳಿತವನ್ನು ಮುಂದುವರೆಸಿಕೊಂಡು ಹೋದ ಅನೇಕ ಪಟ್ಟದ ನಾಗತಿಯರು/ರಾಣಿಯರು ನಾಯಕ ಅರಸು ಮನೆತನಗಳಲ್ಲಿ ಕಾಣುತ್ತೇವೆ.

**ಆಡಳಿತ ನಿರ್ವಹಿಸಿದ ಪಾಳೆಯಗಾರರ ಕಾಲದ ನಾಗತಿಯರು/ ರಾಣಿಯರು**

ಚಿತ್ರದುರ್ಗದ ಹಿರಿಯ ಮದಕರಿ ನಾಯಕನ ಪಟ್ಟದ ರಾಣಿ, ಕಸ್ತೂರಿ ರಂಗಪ್ಪ ನಾಯಕನ ತಾಯಿ ಓಬಳಮ್ಮ ನಾಗತಿ ಎರಡು ವರ್ಷಗಳವರೆಗೆ ಚಿತ್ರದುರ್ಗದ ಸರ್ವಾಧಿಕಾರಿಯಾಗಿ ಆಡಳಿತ ನಡೆಸಿದಳು. ಹರಪನಹಳ್ಳಿಯ ಎರಡನೇಯ ಬಸಂತ ನಾಯಕನ ಪತ್ನಿಯಾದ ಬಾಗುಳಿ ಹರಿಯಮ್ಮಾಜಿನಾಗತಿ ರಾಜ್ಯದ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದಳು.[3] ಹಾಗೆಯೇ ಮೊದಲ ಸೋಮಶೇಖರನ

ಮಡದಿಯಾದ ಸೋಮಮ್ಮಾಜಿ ದತ್ತು ಪುತ್ರರನ್ನು ನೇಮಿಸಿ ಬಹುಕಾಲ ರಾಜ್ಯ ಆಳಿದಳು.[4] ಮೂರನೇ ಸೋಮಶೇಖರನಾಯಕನ ಹೆಂಡತಿ ಸೆರೆಮನೆಯಲ್ಲಿದ್ದಾಗ ಹರಪನಹಳ್ಳಿಯ ಆಡಳಿತವನ್ನು ನಿರ್ವಹಿಸಿದಳು. ಹಾಗೆಯೇ ತರೀಕೆರೆ ಪಾಳೆಯಗಾರ ಸರ್ಜಾ ಹನುಮಪ್ಪ ನಾಯಕನ ನಂತರ ಮೂರನೇ ಪತ್ನಿ ಯಶೋಧಮ್ಮನಾಗತಿ ತರೀಕೆರೆ ಪಾಳೆಯಪಟ್ಟನ್ನು ನೋಡಿಕೊಂಡಳು. ತನ್ನ ಪತಿಯ ಆಶಯದಂತೆ ತಾನೂ ಕೂಡ ಬ್ರಿಟಿಷರನ್ನು ಮತ್ತು ಅವರ ನೀತಿಗಳನ್ನು ವಿರೋಧಿಸಿದಳು. ತನ್ನ ಪತಿಯ ವಂಶಕ್ಕೆ ಕೀರ್ತಿತರುವಂತೆ ನಡೆದುಕೊಂಡ ಈ ನಾಗತಿ ಉದಾರ ದಾನಿಯಾನಿದ್ದಳು. ಪಾಳೆಯಪಟ್ಟಿನ ಅಧಿಕಾರವನ್ನು ದಕ್ಷತೆಯಿಂದ ನಿರ್ವಹಿಸಿಕೊಂಡು ಬಂದಳು.[5] ಕನಕಗಿರಿಯ ರಂಗಪ್ಪ ನಾಯಕ ರಾಣಿ ರಾಜಾ ರಂಗಪ್ಪ ನಾಯಕನ ತಾಯಿ ರಾಣಿ ಗೌರಮ್ಮ ಸಂಸ್ಥಾನದ ಅಧಿಕಾರವನ್ನು ವಹಿಸಿಕೊಂಡಳು. ಸುರಪುರದ ರಾಣಿಯರಾದ ರಾಣಿ ಅಮ್ಮಾನಾಗತಿ, ರಾಣಿ ರಂಗಮ್ಮ, ರಾಣಿ ಕಾಂತಮ್ಮ ರಾಣಿ ಈಶ್ವರಮ್ಮ ಹೀಗೆ ಮೂವರು ರಾಣಿಯರು ರಾಜ್ಯದ ಅಧಿಕಾರವನ್ನು ನೋಡಿಕೊಳ್ಳುತ್ತಿದ್ದರು. ಕನಕಗಿರಿ ಪಾಳೆಯಗಾರರ ವಂಶಸ್ಥರ ಕಾಲದಲ್ಲಿಯೂ ರಾಣಿ ವೆಂಕಟಮ್ಮ, ಹಾಗೂ ರಾಣಿ ಗೌರಮ್ಮ ದತ್ತು ಮಕ್ಕಳನ್ನು ಸ್ವಿಕರಿಸಿ ಆಡಳಿತವನ್ನು ನಿರ್ವಹಿಸಿದಳು.

ಆನೆಗೊಂದಿಯ ನರಸಿಂಹರಾಜು ಈತನ ರಾಣಿಯಾದ ನರಸಿಂಗಮ್ಮ ಮತ್ತು ಇವಳ ತಂಗಿಯಾದ ರಾಣಿ ಕುಪ್ಪಮ್ಮ ಆಡಳಿತವನ್ನು ನಡೆಸುತ್ತಾಳೆ.[6] ಗುಡಗುಂಟಿಯ ರಾಜಾ ಸೋಮಲಿಂಗ ನಾಯಕರ ಪತ್ನಿಯಾದ ರಾಣಿ ಕಾಟಮ್ಮ ಪತಿಯ ಮರಣದ ನಂತರ ಅಧಿಕಾರವನ್ನು ನೋಡಿಕೊಂಡಳು ರತ್ನಗಿರಿಯ ಮಂದಪ್ಪ ನಾಯಕ ಹಾಗೂ ಅವನ ಹೆಂಡತಿ ಮಾದಲಾಂಬಿಕೆ ಆನೆಗುಂದಿಯ ರಾಜ್ಯಭಾರ ಮಾಡಿದ್ದರು.[7] ಎಂದು ಉಲ್ಲೇಖವಿರುವುದನ್ನು ಕಾಣುತ್ತೇವೆ. ನಂತರ ಕುರುಗೋಡು ದೇವಪ್ಪ ನಾಯಕನ ಪತ್ನಿ ದೊಡ್ಡತಲೆ ರಾಮಪ್ಪನನ್ನು ದತ್ತು ಪಡೆದು ಆಡಳಿತ ನಿರ್ವಹಿಸಿದಳು ಎಂದು ತಿಳಿಸುತ್ತಾರೆ. ಆದರೆ ಹೆಸರನ್ನು ಉಲ್ಲೇಖಿಸಿಲ್ಲ ಎಂದು ಹೇಳಬಹುದು. ಬಳ್ಳಾರಿ ಚಿಕ್ಕನಾಯಕನ ಹೆಂಡತಿ ದೇವಪ್ಪನ ತಾಯಿ ಸಂಗನಾಗರಿನಾಗತಿ ಗಂಡ ಮರಣದ ನಂತರ ಸಂಗನಾಗರಿಯು ಆನೆಗೊಂದಿ ಅರಸರ ಅಪ್ಪಣೆ ಪಡೆದು ಯುದ್ಧಮಾಡಿ ಬಳ್ಳಾರಿಯನ್ನು ವಶಪಡಿಸಿಕೊಂಡಳು. ನಾಲ್ಕು ವರ್ಷ ರಾಜ್ಯ ನೋಡಿಕೊಂಡಳು.[8] ಕೆಂಚನ ಗುಡ್ಡದ ಪಂಪಾಪತಿ ಗೌಡನ ಪತ್ನಿ ತಂಗಮ್ಮ ದಕ್ಷತೆಯಿಂದ ರಾಜ್ಯವಾಳುತ್ತಿದ್ದಳು. ಹಾಗೆಯೇ ಹತ್ತಿ ಬೆಳಗಲ್ಲು ಪಾಳೆಯಗಾರನ ಹೆಂಡತಿಯಾದ ಸಾರಮ್ಮನಾಗತಿ ಪತಿಯ ಅಕಾಲಿಕ ಮರಣದಿಂದಾಗಿ 15 ಗ್ರಾಮಗಳ ತಳವಾರಿಕೆಯನ್ನು ಮಾಡಿಕೊಂಡು ಗ್ರಾಮವನ್ನು ಆಳುತ್ತಿದ್ದಳು.

ಹೀಗೆ ನಾಗತಿಯರು ಅಥವಾ ರಾಣಿಯರು ರಾಜ್ಯದ ಆಡಳಿತವನ್ನು ನಿರ್ವಹಿಸಿದ ಪರಿಯನ್ನು ನೋಡಬಹುದು. ಗಂಡನ ಮರಣದ ನಂತರ ರಾಜ್ಯದ ಉಳಿವಿಗೆ ಅಧಿಕಾರದ ಚುಕ್ಕಾಣಿಯನ್ನು ಹಿಡಿದ ನಾಗತಿಯರ ಶೌರ್ಯ, ಧೈರ್ಯವನ್ನೂ ತಿಳಿಸುವುದಾಗಿದೆ. ಹಾಗೆ ರಾಜ್ಯವನ್ನು ಆಳುವುದರ ಜೊತೆಗೆ ನಾಗತಿಯರು ಧರ್ಮಕ್ಕೆ ನೀಡುತ್ತಿದ್ದ ಪ್ರೋತ್ಸಾಹ ದೈವ ಭಕ್ತಿಯನ್ನು ಕಾಣಬಹುದಾಗಿದೆ. ಕೆರೆ–ಕಟ್ಟೆ, ಬಾವಿ, ತೋಪು, ಮಠ, ಗ್ರಾಮ, ದಾನ ಹೀಗೆ ನಾಗತಿಯರು/ರಾಣಿಯರು ಮಾಡಿದ ಉತ್ತಮ ಕೆಲಸದ ಬಗ್ಗೆ ಶಾಸನಗಳಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ. ಚಿತ್ರದುರ್ಗದ ಇತಿಹಾಸದಲ್ಲಿ ವೀರ ಪಾಳೆಯಗಾರರಂತೆ 2 ವರ್ಷಗಳ ಕಾಲ ರಾಜ ಪ್ರತಿನಿಧಿಯಾಗಿ ದಕ್ಷತೆಯಿಂದ ರಾಜ್ಯವಾಳಿದಾಕೆ ಈ ನನ್ನ ತಾಯಿ ಗಂಡುಗಲಿಯಾಗಿ, ಕುದುರೆಯೇರಿ ಶತ್ರುಗಳ ವಿರುದ್ಧ ರಣರಂಗದಲ್ಲಿ ಹೋರಾಡಿ ಶತ್ರುಗಳ ತಲೆಗಳನ್ನು ತರಗೆಲೆಯಂತರ ಚೆಂಡಾಡಿದ ಏಕೈಕ ವೀರ ಮಹಿಳೆ ರಾಜ ಮಾತೆ ಗಂಡೋಬಳವ್ವನಾಗತಿ,

ಹಾಗೆಯೇ ಹಿರಿಯೂರಿನಲ್ಲಿ ಅನ್ನ ಛತ್ರ ಸ್ಥಾಪಿಸುವುದಕ್ಕಾಗಿ ಗೌಡನಹಳ್ಳಿ ಮಠಕ್ಕೆ ದತ್ತಿ ನೀಡಿ ಅದರಲ್ಲಿ ಗಂಡೋಬಳವ್ವವರನ್ನು "ಮಾತೋಶ್ರೀ" ಎಂದು ಹೊರಕೆರೆ ದೇವರಪುರದ ಶಾಸನದಲ್ಲಿ 'ತಾಯಿ' ಎಂದು ಶಿಲಾ ಶಾಸನ ಹಾಕಿಸಿ ತನ್ನ ಮಾತೃ ಋಣವನ್ನು ಸಲ್ಲಿಸುತ್ತೇನೆಂದು ಹಾಗೆಯೇ ಮಾಡಿದರು.[9]

ಓಬಣ್ಣ ನಾಯಕನ ಸೊಸೆ ತನ್ನ ಗಂಡ ನರಸಿಂಹನು ಮರಣ ಹೊಂದಿದ್ದಕ್ಕಾಗಿ ಅವನ ಹೆಸರಿನಲ್ಲಿ 'ನರಸಪುರ' ಎಂಬ ಗ್ರಾಮವನ್ನು ನಿರ್ಮಿಸಿ ಅವನ ನೆನಪಿಗಾಗಿ ಆಂಜನೇಯನ ಗುಡಿಯನ್ನು ನಿರ್ಮಿಸಿದಳು. ಚಿಕ್ಕ ಕೋನಮ್ಮ ಗಂಡನಿಗಾಗಿ ಶಿಲಾಶಾಸನವನ್ನು ಬರೆಸಿದಳು ಚಿತ್ರದುರ್ಗದ ಪಾಳೆಯಗಾರರ ಇತಿಹಾಸದಲ್ಲಿ ಶಿಲಾ ಶಾಸನ ಹಾಕಿಸಿದ ನಾಗತಿಯರಲ್ಲಿ ಚಿಕ್ಕ ಕೋನಮ್ಮ ನಾಗತಿಗೆ ಪ್ರಥಮ ಮಹಿಳೆ ಎಂದು ಹೇಳಲಾಗಿದೆ.[10] ಚಿತ್ರದುರ್ಗದ ಪಾಳೆಯಗಾರರು ಅನೇಕ ಗ್ರಾಮಗಳನ್ನು ಹೊಸದಾಗಿ ಕಟ್ಟಿಸಿದರು. ಕೆಲವು ಗ್ರಾಮಗಳಿಗೆ ರಾಜ ಮನೆತನದ ಹೆಂಗಸರ ಹೆಸರನ್ನು ಇಟ್ಟರು, ಹೇಗೆಂದರೆ ವೀರವ್ವ ನಾಗತಿಹಳ್ಳಿ, ಕೆಂಚವ್ವ ನಾಗತಿಹಳ್ಳಿ, ಓಬವ್ವ ನಾಗತಿಹಳ್ಳಿ ಇನ್ನು ಮುಂತಾದವು. ಇಮ್ಮಡಿ ಉಡಿಚ ನಾಯಕನ ಪತ್ನಿಯಾದ ರಾಣಿಚಿನ್ನಮ್ಮ ಕನಕರಾಯನ ಕೆರೆ, ಪೇಟೆ ಬಸಣ್ಣ ದೇವಾಲಯವನ್ನು ಕಟ್ಟಿಸಿದಳು. ಅಲ್ಲದೆ ಲಕ್ಷ್ಮಿದೇವಿ ಗುಡ್ಡದಲ್ಲಿ ಒಂದು ಬಾವಿಯನ್ನು ಕಟ್ಟಿಸಿದಳು.[11] ತರೀಕೆರೆಯ ರಾಣಿ ಯಶೋದಮ್ಮ ನಾಗತಿ 1989ರಲ್ಲಿ ಚಿತ್ರದುರ್ಗ ಮುರುಘರಾಜೇಂದ್ರ ಮಠಕ್ಕೆ ಉಯಿಲು ಪತ್ರ ಬರೆದು ಕೊಟ್ಟಳು. ನಂತರ ಬಾಲಕಿಯರಿಗಾಗಿ ಪ್ರೌಢಶಾಲೆಯನ್ನು ಪ್ರಾರಂಭಿಸಿದಳು.[12]

ದಾದಾ ನಾಯಕನ ಹೆಂಡತಿ ಪುಣ್ಯ ಸ್ತ್ರೀ ಹೊನ್ನಾನಾಗತಿ ಗಂಟೆಯನ್ನು ಉಚ್ಚಂಗಮ್ಮನವರ ವೋಲಗಕ್ಕೆ ಮಾಡಿಸಿದಳು.[13] ರಾಣಿ ಸೋಮಮ್ಮಾಜಿ ಹಂಪಿ ವಿರೂಪಾಕ್ಷ ದೇವರಿಗೆ ಜೋಡು ರಥಗಳನ್ನು ಮಾಡಿಸಿ ಕೊಟ್ಟಳು. ಉತ್ಸವ ಕಾಲದಲ್ಲಿ ಬ್ರಾಹ್ಮಣರಿಗೆ ಅನ್ನ ಸಂತರ್ಪಣೆಗೆ ನೆರವನ್ನು ನೀಡಿ, ಕೂಡ್ಲಿ ಶೃಂಗೇರಿ ಸ್ವಾಮಿಗಳಿಗೆ ಉದ್ದಗಟ್ಟಿಯಲ್ಲಿ ಮಠ ಕಟ್ಟಿಸಿ ಹರಿವಿ ಬಸಾಪುರ ಗ್ರಾಮವನ್ನು ದತ್ತಿ ಬಿಟ್ಟಳು. ಬಾಗುಳಿ ಹರಿಯಮ್ಮಾಜಿ ನಾಗತಿ ಉದ್ಗಟ್ಟಿಯಲ್ಲಿ ಒಂದು ಮಠವನ್ನು ಕಟ್ಟಿಸಿದಳು. ಹಾಗೆಯೇ ಹರಪನಹಳ್ಳಿ ತಾಲ್ಲೂಕಿಗೆ ಸೇರಿದ ಉಚ್ಚಂಗಿ ದುರ್ಗಕ್ಕೆ ಹೋಗುವ ಮಾರ್ಗದ ಒಂದು ಬದಿಯಲ್ಲಿ ಒಂದು ಹಳ್ಳಿ ಇದೆ. ಇದಕ್ಕೆ ಹರೇನಹಳ್ಳಿ, ಹರಿಯಮ್ಮನಹಳ್ಳಿ ಎಂದು ಕರೆಯುವರು. ಈ ಹಳ್ಳಿ ಹರಿಯಮ್ಮಾಜಿ ಹೆಸರಿನಲ್ಲಿ ಸ್ಥಾಪನೆಯಾಗಿದೆ.[14] ಸೋಮಶೇಖರ ಪತ್ನಿಯಾದ ನೀಲಮ್ಮ ನೀಲಗುಂದ ಗ್ರಾಮದಲ್ಲಿ ವಾಸವಾಗಿದ್ದು ಆ ಗ್ರಾಮಕ್ಕೆ 'ನೀಲಾವತಿ ಪಟ್ಟಣ' ಎಂದು ಕರೆದರು. ಸಂತೆಬೆನ್ನೂರು ಹನುಮಪ್ಪ ನಾಯಕನ ಹೆಂಡತಿ ಗಿರಿಯಮ್ಮ ನಾಗತಿಯು ಕೆರೆಯನ್ನು ಕಟ್ಟಿಸಿದಳು. ಸೋಮಮ್ಮಾಜಿಯು ಜೋಯಿಸರಿಗೆ ನಾರಾಯಣ ದೇವನಕೆರೆ ಡಣಾ ನಾಯಕನ ಕೆರೆಗಳನ್ನು ದಾನ ಕೊಟ್ಟಳು. ನಾಯಕನಹಟ್ಟಿ ಪಾಳೇಯಗಾರ ಕಾಲದ ಕಸ್ತೂರಿ ಮಲ್ಲಪ್ಪ ನಾಯಕನ ತಾಯಿಯಾದ ಲಕ್ಷ್ಮವ್ವ ನಾಗತಿಯ ಹೆಸರಿನಲ್ಲಿ ಕೋಟೆಯೊಳಗೆ ಕ್ರಿ.ಶ 1620ರಲ್ಲಿ ವಿಶಾಲವಾದ ಕೆರೆಯೊಂದನ್ನು ನಿರ್ಮಿಸಿ ಅದಕ್ಕೆ *"ಲಕ್ಷ್ಮವ್ವ ನಾಗತಿಕೆರೆ"* ಎಂದು ಹೆಸರಿಟ್ಟನು. ಮೊಳಕಾಲ್ಮೂರು ಬೆಟ್ಟದ ಬಸವನ ಬಾಗಿಲ ಬಳಿ ಶಾಸನವೊಂದನ್ನು ಕೆತ್ತಿಸಿದನು

ರಾಜಾ ಜಡಿಸೋಮಪ್ಪನ ಹೆಂಡತಿ ರಾಣಿ ಗೌರಮ್ಮ ರಾಯದುರ್ಗದ ಸಮೀಪ ಒಂದು ಕೆರೆಯನ್ನು ಕಟ್ಟಿಸಿದ್ದಾಳೆ. ಅದನ್ನು 'ರಾಣಿ ಗೌರಮ್ಮನ ಕೆರೆ' ಎಂದು ಕರೆಯುತ್ತಾರೆ. ಕೆಲವಡಿ ಉಡಚ ನಾಯಕನ ಪತ್ನಿ ರಾಣಿ ಕಾಟಮ್ಮಳು ಮೌನೇಶ್ವರ ಮಠವನ್ನು ಕಟ್ಟಿಸಿದಳು, ನಂತರ ರಾಣಿ ಗೌರಮ್ಮಳು ಕನಕಾಚಲದೇವರ ರಥೋತ್ಸವವನ್ನು ಅದ್ದೂರಿಯಾಗಿ ನಡೆಯುವಂತೆ ಮಾಡಿದಳು. ತೇರು ನಿಲ್ಲುವುದಕ್ಕೆ ಒಂದು ತೇರಿನ ಮನೆಯನ್ನು ನಿರ್ಮಿಸಿದಳು. ಇಮ್ಮಡಿ ಉಡಚ ನಾಯಕನ ಮೂರುಜನ ಹೆಂಡತಿಯರು

ಇದ್ದರು. ರಾಣಿ ಕನಕಮ್ಮ 1668 ರಲ್ಲಿ ಲಕ್ಷ್ಮೀಗುಡ್ಡದ ಉತ್ತರ ಭಾಗದ ಇಳಿಜಾರಿನಲ್ಲಿ ಕನಕರಾಯನ ಹೆಸರಿನಲ್ಲಿ ಬಾವಿಯನ್ನು ನಿರ್ಮಿಸಿದಳು. ರಾಣಿ ಚಿನ್ನಮ್ಮಳು 1675ರಲ್ಲಿ ಕನಕಾಚಲಾ ದೇವಾಲಯದ ಪ್ರಕಾರದಲ್ಲಿ ನೆಲಕ್ಕೆ ಕಲ್ಲು ಹಾಸಿಗೆ ಹಾಕಿಸಿದಳು. ಗರುಡ ಗುಡಿಯ ಪಕ್ಕದಲ್ಲಿರುವ ಶಿಲಾಶಾಸನವು ಈ ವಿಷಯವನ್ನು ತಿಳಿಸುತ್ತದೆ. ಹಾಗೆಯೇ 1679ರಲ್ಲಿ ರಾಣಿ ಚಿನ್ನಮ್ಮಳು ಪೇಟೆ ಬಸವೇಶ್ವರ ದೇವಾಲಯವನ್ನು ನಿರ್ಮಿಸಿದಳು. 'ಚಿನ್ನದೇವಿ ಕೆರೆ' ಎಂದು ಕರೆಯುವ ಕೆರೆಯನ್ನು ಈ ರಾಣಿಯೇ ಕಟ್ಟಿಸಿದಳು.

ರಾಣಿ ಅಚ್ಚಮ್ಮ ಸೋಮಸಾಗರದ ಸಮೀಪ ಬಾವಿಯೊಂದನ್ನು ಕಟ್ಟಿಸಿದಳು. ಈ ಬಾವಿಯನ್ನು 'ಅಚ್ಚಮ್ಮ ಬಾವಿ' ಎಂದು ಕರೆಯಲಾಗುತ್ತದೆ. ಒಂದನೇ ಕಸ್ತೂರಿ ರಂಗಪ್ಪನ ಪತ್ನಿಯಾದ ಕಾಟವ್ವ ನಾಗತಿ ತನ್ನ ಹೆಸರಿನಲ್ಲಿ 'ಕಾಟಿಮಠ' ಮತ್ತು ಒಂದು ತೋಪವನ್ನು ನಿರ್ಮಿಸಿದಳು.  ಕೆರೆಯನ್ನು ಸಹ ಕಟ್ಟಿಸಿದನು. ಕನಕಗಿರಿಯ ನಾಲ್ಕನೇಯ ದೊರೆಯಾದ ಕನಕಪ್ಪ ಉಡಚನಾಯಕ ಪತ್ನಿಯಾದ ರಾಣಿ ಲಕ್ಷ್ಮಿನಾಗತಿಯ ಹೆಸರಿನಲ್ಲಿ ಬಾಗುಳಿ ಹಗರಿಯಮ್ಮಾಜಿಯು ಕೊರಗಲ್ಲು ಕಾಲುವೆಯ ಕಟ್ಟೆಯನ್ನು ಕಟ್ಟಿಸಿ ಭೂದಾನವನ್ನು ನೀಡಿದಳು. ಈ ರಾಣಿಯನ್ನು ನಾಗತಿ ಎಂದು ವಿಶೇಷವಾದ ಗೌರವನಾಮದಿಂದ ಕರೆಯುತ್ತಿದ್ದರು. ಆಡಳಿತದಲ್ಲಿ ಅವರಲ್ಲಿ ಸಂಪೂರ್ಣ ಸ್ವಾತಂತ್ರ್ಯವಿತ್ತು. ದಾನ, ಧರ್ಮ ಮಾಡುವುದರಲ್ಲಿ ಕೆರೆಕಟ್ಟೆ, ತೋಪು, ಗ್ರಾಮ ಬಾವಿಗಳನ್ನು ಕಟ್ಟಿಸುವುದರಲ್ಲಿ ಮಠಮಂದಿರಗಳನ್ನು ನಿರ್ಮಿಸುವುದರಲ್ಲಿ ಅವರು ರಾಜನಂತೆಯೇ ಮುಂದಿದ್ದರು. ನಾಗತಿಯರು ರಾಜ್ಯದ ಎಲ್ಲಾ ಚಟುವಟಿಕೆಗಳಲ್ಲೂ ಆಸಕ್ತಿವಹಿಸಿದರೆಂಬುದು ಖಚಿತವಾಗುತ್ತದೆ. ಪಾಳೆಯಗಾರರ ನಾಗತಿಯರಿಗೆ ಸಂಬಂಧಿಸಿದಂತೆ ಹಲವು ಮಾಸ್ತಿಗಲ್ಲುಗಳನ್ನು ನಾವು ಕಾಣಬಹುದು.  ಅವರ ಪಾತ್ರ ರಾಜಕೀಯ, ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳಲ್ಲಿ ಅವರದು ಸಿಂಹಪಾಲು ಎಂಬುದನ್ನು ಮರೆಯುವಂತಿಲ್ಲ. ನಾಗತಿಯರು ಪ್ರಜಾ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ವಿಶೇಷ ಪಾಳೆಯಗಾರರ ಕಾಲದಲ್ಲಿ ಆಡಳಿತ ಮಾಡಿದ ಅಥವಾ ನಿರ್ವಹಿಸಿದ ನಾಗತಿಯರಿಗೆ ಇದ್ದ ಬಿರುದನ್ನು ಕಾಣಬಹುದು.

ಓಬಳವ್ವ ನಾಗತಿಯು ಗಂಡಿನಂತೆ ರಾಜ್ಯವಾಳುತಿದ್ದರಿಂದ ಈಕೆಗೆ 'ಗಂಡೋಬಳವ್ವ ನಾಗತಿ' ಎಂದು ಕರೆಯುತ್ತಾರೆ. ರಾಣಿ ಹರಿಯಮ್ಮಾಜಿ ನಾಗತಿ ಎಂದು ಕರೆದುಕೊಂಡಿರುವ ಇವಳಿಗೆ ವಿಜಯನಗರದ ಅರಸರು ಇವಳಿಗೆ 'ರಾಣಿ' ಎಂದು ಮಾನ್ಯ ಮಾಡಿದ್ದಾರೆ ಈಕೆ ತನ್ನ ಹೆಸರಿಗೆ 'ಬಾಗುಳಿ ಹರಿಯಮ್ಮಾಜಿ' ಎಂದು ಕರೆದುಕೊಂಡಿದ್ದಾಳೆ ಎಂಬುದನ್ನು ತಿಳಿಯಲಾಗಿದೆ. ಕೆಂಚನ ಗುಡ್ಡದಲ್ಲಿ ಆಳ್ವಿಕೆ ನಡೆಸಿದ ತಂಗಮ್ಮನಿಗೆ  'ದೇಶಾಯಿನಿ' ಎಂಬ ಬಿರುದು ಇತ್ತು ಎಂದು ಹೇಳಲಾಗಿದೆ.

**ಸಮಾರೋಪ**

ಒಟ್ಟಾರೆಯಾಗಿ ಹೇಳುವುದಾದರೆ ಪಾಳೆಯಗಾರರ ಕಾಲದ ನಾಗತಿಯರು ಯಶಸ್ವಿಯಾಗಿ ಆಡಳಿತ ಕ್ಷೇತ್ರದಲ್ಲಿ, ಸಾಮಾಜಿಕ ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳನ್ನು ಕಾಣುತ್ತೇವೆ. ಕೆಲವು ನಾಗತಿಯರು ಧೈರ್ಯದಿಂದ ಶೌರ್ಯದಿಂದ ಮುತ್ಸದ್ಧಿತನದಿಂದ ಉತ್ತಮ ಸ್ಥಾನಮಾನವನ್ನು ಗಳಿಸಿಕೊಂಡು ಪುರುಷರಷ್ಟೇ ಸಮಾನರಾಗಿ ನಿಲ್ಲುತ್ತಾರೆ. ದೇವಾಲಯ ಕಟ್ಟುವುದರಲ್ಲಿ ಎಲ್ಲಾ ಅಭಿವೃದ್ಧಿ ಕೆಲಸ ಕಾರ್ಯಗಳಲ್ಲಿ ಸಹಾಯ ಮಾಡುತ್ತಾ ಎಲ್ಲಾ ರೀತಿಯ ಉತ್ಸವ ಕೆಲಸ ಕಾರ್ಯಗಳಲ್ಲಿ ಪಾಲ್ಗೊಂಡು ಸಮಾಜೋನ್ಮುಖಿಯಾಗಿರುವುದನ್ನು ಕಾಣತ್ತೇವೆ. ಹಲವು ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ನಾಗತಿಯರಿಗೆ ದೊರೆತ ಅಲ್ಪ ಅವಕಾಶಗಳಲ್ಲಿ ಅದ್ವಿತೀಯವಾಗಿ ಸಾಧನೆ

ಮಾಡಿರುವುದನ್ನು ಕಾಣಬಹುದಾಗಿದೆ. ಇಂದಿಗೂ 'ಪಾಳೆಯಗಾರರ' ವಂಶಸ್ಥರ ಮಹಿಳೆಯರನ್ನು ಕಾಣಬಹುದಾಗಿದೆ. ಇವರು ತಮ್ಮದೇ ಆದ ವೈಯಕ್ತಿಕ ಜೀವನವನ್ನು ನಡೆಸುತ್ತಾರೆ. ಪ್ರಸ್ತುತ ಗುಡ ಗುಂಟಿಯ ರಾಜ ಅಮರಪ್ಪ ನಾಯಕರ ಧರ್ಮ ಪತ್ನಿಯಾದ ಶ್ರೀಮತಿ ರಾಣಿ ಜಯಲಕ್ಷ್ಮೀ ದೇವಿ ಅವರು ಎರಡು ಸಲ ಜಿಲ್ಲಾ ಪಂಚಾಯಿತಿಯ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು.[15] ಹಾಗೆಯೇ ದೇವದುರ್ಗ ವಂಶಸ್ಥರಾದ ರಾಜಾ ವೆಂಕಟಪ್ಪ ನಾಯಕನ ಪತ್ನಿ ರಾಣಿ ಶಾಂತ ಕುಮಾರಿ ಅವರು ಇಂದು ಜನಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.[16] ಪಾಳೆಯಗಾರರ ಆಳ್ವಿಕೆ ಕೊನೆಗೊಳ್ಳುತ್ತಾ ನಾಗತಿಯರ ಹೆಸರಿನ ಹಳ್ಳಿ, ಕೆರೆಗಳನ್ನು ಕಾಣಬಹುದು. ಆದರೆ ಇತ್ತೀಚಿನ ದಿನಗಳಲ್ಲಿ ಈ ನಾಗತಿ ಎಂಬ ಪದ ಬಳಕೆ ಕಡಿಮೆಯಾಗಿದೆ. ನಾಗತಿಯರ ಕುರಿತು ಇನ್ನು ಹೆಚ್ಚಿನ ಅಧ್ಯಯನಗಳು ನಡೆದಲ್ಲಿ ನಾಗತಿಯರ ನೀಡಿದ ಕೊಡುಗೆಗಳು ಬೆಳಕಿಗೆ ಬರುತ್ತವೆ.

**ಕೊನೆ ಟಿಪ್ಪಣಿಗಳು**

1. ಅಮರೇಶ ಯತಗಲ್. (2005). *ಕರ್ನಾಟಕ ನಾಯಕ ಅರಸು ಮನೆತನಗಳ ವಿಶಿಷ್ಟ ಸಾಂಸ್ಕೃತಿಕಾಚರಣೆಗಳು: ಚಾರಿತ್ರಿಕ ಅಧ್ಯಯನ.* ಅಪ್ರಕಟಿತ ಪ್ರೌಢಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ. ಹಂಪಿ ಪು.ಸಂ. 143
2. ಪುಟ್ಟಣ್ಣ ಎಂ.ಎಸ್. (1997). *ಚಿತ್ರದುರ್ಗದ ಪಾಳೆಯಗಾರರು.* ಕಾವ್ಯಾಲಯ ಪ್ರಕಾಶನ. ಪು.ಸಂ.1
3. ಸದಾಶಿವಪ್ಪ, ಕುಂ.ಬಾ. (2006). *ಹರಪನಹಳ್ಳಿ ಪಾಳೆಯಗಾರರ ಇತಿಹಾಸ ದರ್ಶನ.* ಕನ್ನಡ ಸಾಹಿತ್ಯ ಪರಿಷತ್ತು. ಪು.ಸಂ. 43,
4. ಸದಾಶಿವಪ್ಪ. ಕುಂ.ಬಾ. (2006). ಪೂರ್ವೋಕ್ತ. ಪು.ಸಂ.20
5. ಭೋಜ್ಯ ನಾಯ್ಕ ಎಲ್. ಎಚ್. (2017). ದಾವಣಗೆರೆ ಜಿಲ್ಲೆಯ ಪಾಳೆಯಗಾರರು: ಚಾರಿತ್ರಿಕ ಅಧ್ಯಯನ. ಅಪ್ರಕಟಿತ ಪ್ರೌಢಪ್ರಬಂಧ, ಕನ್ನಡ ವಿಶ್ವ ವಿದ್ಯಾಲಯ. ಪು.ಸಂ. 261,262.
6. ಅಮರೇಶ ಯತಗಲ್. (2005). *ಪೂರ್ವೋಕ್ತ.* ಪು. ಸಂ.78
7. ಶ್ಯಾಮಲ ಸಿ.ಆರ್. (2008). *ಪೂರ್ವ ಕರ್ನಾಟಕದ ಪಾಳೆಯಗಾರರು: ಒಂದು ಅಧ್ಯಯನ.* ಕನ್ನಡ ಸಾಹಿತ್ಯ ಪರಿಷತ್ತು. ಪು. ಸಂ.199.
8. ಶ್ಯಾಮಲ ಸಿ.ಆರ್. (2008). *ಪೂರ್ವೋಕ್ತ.* ಪು.ಸಂ. 47.
9. ಗಿರಿಜಾಟಿ. (2014). *ಚಿತ್ರದುರ್ಗ–ನಾಗತಿ ಗಂಡೋಬಳವ್ವ.* ಗಿರಿಶೈಲ ಪ್ರಕಾಶನ. ಪು.ಸಂ. 95
10. ರಾಜಶೇಖರಪ್ಪ. (2002). ಚಿತ್ರದುರ್ಗದ ದೊರೆ ಓಬಣ್ಣ 1ನೇ ಮಧಕರಿ ನಾಯಕರ ಸೊಸೆ ಚಿಕ್ಕ ಕೋನಮ್ಮನ ಕಸವನಹಳ್ಳಿ ಶಾಸನ, ಗಟ್ಟಿ ಹೊಸಹಳ್ಳಿ ಗಟ್ಟಿಗ. ***ಇಲ್ಲಿ*** ವೀರೇಂದ್ರ ಸಿಂಹ ಮತ್ತು ತೇಜಶ್ವಿ ಕಟ್ಟಿಮನಿ (ಸಂ.) *ವಾಲ್ಮೀಕಿ ಸಾಹಿತ್ಯ ಸಂಪದ.*
11. ದುರುಗಪ್ಪ ಎಂ.ಕೆ. (2007). *ಕನಕಗಿರಿ ನಾಯಕರು.* ಪವಿತ್ರ ಪಬ್ಲಿಕೇಶನ್ಸ್. ಪು.ಸಂ.23
12. ವಿರುಪಾಕ್ಷಿ ಪೂಜಾರಹಳ್ಳಿ. (2006). *ವಾಲ್ಮೀಕಿ ಸಮುದಾಯದ ಪ್ರಾತಃಸ್ಮರಣೀಯರು.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ. ಪು.ಸಂ. 159
13. ಸದಾಶಿವಪ್ಪ, ಕುಂ. ಬಾ. (2006). *ಪೂರ್ವೋಕ್ತ.* ಪು.ಸಂ.6
14. ಅದೇ., ಪು.ಸಂ.43
15. ಅಮರೇಶ ಯತಗಲ್. (2005). *ಪೂರ್ವೋಕ್ತ.* ಪು.ಸಂ. 60

16. ಅದೇ. 71

**ಪರಾಮರ್ಶನ ಗ್ರಂಥಗಳು**


- ಅಮರೇಶ ಯತಗಲ್. (2013). *ಕರ್ನಾಟಕವನ್ನಾಳಿದ ನಾಯಕ ರಾಣಿಯರು ಮತ್ತು ವೀರ ಮಹಿಳೆಯರು.* ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ.
- ದುರುಗಪ್ಪ ಎಂ.ಕೆ. (2010). *ವಿಜಯನಗರೋತ್ತರ ಕಾಲೀನ ಬೇಡ ಜನಾಂಗ: ಚಾರಿತ್ರಿಕ ಅಧ್ಯಯನ.* ವಾಲ್ಮೀಕಿ ಸಾಹಿತ್ಯಸಂಪದ.
- ಗಿರಿಜಾ ಟಿ. (2013). ದುರ್ಗದ ನಾಗತಿಯರು, ಗಿರಿಜಾ ಪ್ರಕಾಶನ.
- ಶರಣಬಸಪ್ಪ ಕೋಳ್ಕರ್. (2008). ಕನಕಗಿರಿಯ ರಾಣಿಯರು. *ವಾಲ್ಮೀಕಿ ಸಾಹಿತ್ಯ ಸಂಪದ.*
- ಶಿವಣ್ಣ ಬಿ. (1998). ತರೀಕೆರೆ ಪಾಳೆಯಗಾರರ ಕಥೆ–ವ್ಯಥೆ. *ವಾಲ್ಮೀಕಿ ಬಂದು.*
- ವೆಂಕಟೇಶ ನಾಯಕ. (2012). *ಸುರಪುರ ಸಂಸ್ಥಾನದ ವೀರ ರಾಣಿಯರು.* ನಾಯಕರ ಮಹಾಸಂಸ್ಥಾನ.
- ವಿರುಪಾಕ್ಷಿ ಪೂಜಾರಳ್ಳಿ. (2008). *ಬೇಡ ಬುಡಕಟ್ಟಿನ ಚರಿತ್ರೆ* ಮತ್ತು *ಸಂಸ್ಕೃತಿ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.
- ವಿರುಪಾಕ್ಷಿ ಪೂಜಾರಹಳ್ಳಿ. (2004). *ಬಳ್ಳಾರಿ ಜಿಲ್ಲೆಯ ಪಾಳೆಯಗಾರರು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಯೋಗೀಶ್ವರಪ್ಪ. ಡಿ.ಎನ್. (2001). *ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು.* ಧಾತ್ರಿ ಪುಸ್ತಕಮಾಲೆ.